ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ಗೇಣಿ ರಹಿತ ದೃಢೀಕರಣ ಪತ್ರದ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

572 (846) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಭೂ ಸುಧಾರಣಾ ಕಾಯಿದೆಯಡಿ ಈ ದಿನಾಂಕಕ್ಕೆ ನಮೂನೆ-7 ಅಥವಾ 48ರಲ್ಲಿ ಯಾವುದೇ ವ್ಯಕ್ತಿಯು ಈಗ ಗೇಣಿ ಅರ್ಜಿಯನ್ನು ದಾಖಲಿಸಲು ಅವಕಾಶವಿರುವುದಿಲ್ಲ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕರ್ನಾಟಕ ಭೂ ಸುಧಾರಣೆ ಕಾಯಿದೆಯಡಿ ಒಂದು ಗ್ರಾಮದ ಸ.ನಂ. ಜಮೀನಿನ ಗೇಣಿ ರಹಿತ ದೃಢೀಕರಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರ್‌ಗಳು ನೀಡುತ್ತಿದ್ದು, ಸದರಿ ದೃಢೀಕರಣ ಪತ್ರದ ಕೆಳಗೆ ಈ ದೃಢೀಕರಣ ಪತ್ರವು ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತದೆ ಎಂದು ನಮೂದಿಸಿ ನೀಡುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಗೇಣಿ ಅರ್ಜಿಗಳನ್ನು ದಾಖಲಿಸಲು ಈಗ ಅವಕಾಶ ಇಲ್ಲದೆ ಇರುವುದರಿಂದ ತಹಶೀಲ್ದಾರ್‌ರವರ ಕಛೇರಿಯಲ್ಲಿ ನೀಡುತ್ತಿರುವ ಗೇಣಿ ರಹಿತ ದೃಢೀಕರಣ ಪತ್ರದ ಕೆಳಗೆ ಈ ದೃಢೀಕರಣ ಪತ್ರವು ಒಂದು ವರ್ಷ ಚಾಲ್ತಿಯಲ್ಲಿ ಇರುತ್ತದೆ ಎಂಬ ಷರತ್ತನ್ನು ತೆಗೆದುಹಾಕಲು ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರ ಕ್ರಮ ಜರುಗಿಸುವುದೇ ? (ಸ್ಪಷ್ಟ ಉತ್ತರ ನೀಡುವುದು)